(d) In view of the reply furnished against item (c), this does not arise. In cases of destruction of plantations by encroachers, apart from taking suitable action against them, such areas have also been replanted.

Tumkur Amani Tank

610 SRI S. SHAFI AHMED (Tumkur). Will the Minister for Transport and Minor Irrigation be pleased to state :-

(a) whether it is a fact that works of Tumkur Amani Tank is not in progress ;

(b) whether it is a fact that many representations have been received by Government from public to complete the work ;

(c) if so, the action taken in this behalf ?

SRI M. M. J. SADYOJATHA (Minister for Transport and Minor Irrigation).-

(a) No

(b) No

(c) Does not arise in view of reply to clause (a) above.

Representation by Members.

(i) *Delay in supplying answer to calling Attention Motion.*

ಶ್ರೀ ಕೆ. ಬಿ. ಮಲ್ಲಪ್ಪ (ಅರಕಲಗೂಡು) —ಸ್ವಾಮಿ ನಾನು ತಮಗೆ ಒಂದು ಪ್ರಶ್ನೆ ಹಾಕಿತ್ತೇನೆ. ಏನೆಂದರೆ, ನಾವು ಇಲ್ಲಿಗೆ ಏತಕ್ಕೆ ಬಂದಿದ್ದೇವೆ ನಮ್ಮ ಕೆಲಸವೇನು ಎಂಬ ಬಗ್ಗೆ ತಾವು ನಮಗೆ ಮಾರ್ಗದರ್ಶನ ನೀಡುವುದು ಒಳ್ಳೆಯದು. ಏಕೆಂದರೆ, ನಾವು ಇಲ್ಲಿಗೆ ಬಂದು ಎರಡು ವರ್ಷ ೩ ತಿಂಗಳ ಮೇಲಾಯಿತು. ಇಲ್ಲಿಯವರೆಗೆ ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ನನಗೆ ತಾವು ಆವಕಾಶ ಮಾಡಿಕೊಟ್ಟಿಲ್ಲ. ನಾವು ಕೆಲವರು ಹೊಸದಾಗಿ ಇಲ್ಲಿಗೆ ಆರಿಸಿ ಬಂದಿದ್ದೇವೆ ನಾವು ಹೊಸಬರಾದರೂ ಸಹ ಇಲ್ಲಿ ಯಾವ ರೀತಿ ನಡೆದುಕೊಳ್ಳಬೇಕು, ಇಲ್ಲಿನ ನಿಯಮಗಳೇನು ಎಂಬುದನ್ನು ಸಾಮಾನ್ಯವಾಗಿ ಅಲ್ಪಸ್ವಲ್ಪ ತಿಳಿದುಕೊಂಡಿದ್ದೇವೆ. ಆದರೂ ಸಹ ಇಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂಬ ಬಗ್ಗೆ ನಾವು guideline ಹಾಕಿ ಕೊಟ್ಟರೆ ಒಳ್ಳೆಯದು ಇಲ್ಲದಿದ್ದರೆ ನಾನು ಈ ಸಭೆಗೆ ಆರಿಸಿ ಬಂದಿರುವುದೇ ತಪ್ಪಾಗುತ್ತದೆ. ಮತ್ತು ಜನರೂ ಸಹ ನನ್ನನ್ನು ಆರಿಸಿ ಕಳುಹಿಸಿಕೊಟ್ಟಿದ್ದು ತಪ್ಪಾಯಿತು ಎಂದು ತಿಳಿದುಕೊಳ್ಳಬೇಕಾಗುತ್ತದೆ. ಆದ್ದರಿಂದ ತಾವು ಒಂದು guideline ಹಾಕಿಕೊಡಿ. ನಾನು ೧೫ ದಿವಸಗಳ ಮೊದಲು ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ತಮಗೆ ಕಳುಹಿಸಿಕೊಟ್ಟೆ. ಹಾಸನದಲ್ಲಿ ಒಬ್ಬ ಹುಡುಗನ ಕೈ-ಕಾಲು ಕತ್ತರಿಸಿ ರೈಲ್ವೇ ಕಂಬಿಯ ಮೇಲೆ ಹಾಕಿದ್ದರು, ಇದರ ಬಗ್ಗೆ ನಾನು ಕೊಟ್ಟ ನೋಟೀಸಿಗೆ ತಾವು ಕಾಳಜಿ ವಹಿಸಿ ಸರ್ಕಾರದಿಂದ ಇನ್ನೂ ಉತ್ತರವನ್ನು ತರಿಸಿಲ್ಲ ಅಷ್ಟೇ ಅಲ್ಲ, ನಾನು ಕಳುಹಿಸಿಕೊಟ್ಟಿರುವ ಪ್ರಶ್ನೆಗಳಿಗೂ ಸಹ ಉತ್ತರಗಳು ಬಂದಿಲ್ಲ. ಈ ವಿಚಾರದಲ್ಲಿ ನಾನು ತಮ್ಮ ಛೇಂಬರಿಗೂ ಸಹ ಬಂದು ನೋಡಿದೆ. ಆದರೆ ಇನ್ನೂ ಪರಿಹಾರ ಸಿಗಲಿಲ್ಲ. ಈ ರೀತಿ ಆದರೆ ನಾವು ಇಲ್ಲಿಗೆ ಏತಕ್ಕೆ ಬರಬೇಕು ? ನನಗೆ ಇನ್ನು ೨೯ ದಿವಸಗಳ ಟಿ ಎ.ಡಿ ಎ. ಕೊಟ್ಟುಬಿಡಿ ಇಲ್ಲಿ ಸುಮ್ಮನೆ ಇರುವ ಬದಲು ಊರಿಗೆ ಹೋಗಿ ಮನೆಯ ಕೆಲಸವನ್ನೋ, ಜನರ ಕೆಲಸವನ್ನೋ ಮಾಡುತ್ತೇನೆ

ಹಾಜರೀ ಪುಸ್ತಕದಲ್ಲಿ ಸಹಿ ಕೂಡ ಮಾಡುವುದಿಲ್ಲ. ಒಟ್ಟಿನಲ್ಲಿ ನಾವು ಯಾವ ರೀತಿ ನಡೆದುಕೊಳ್ಳ ಬೇಕೆಂಬ ಬಗ್ಗೆ ತಾವು ಮಾರ್ಗದರ್ಶನ ಮಾಡುವುದು ಒಳ್ಳೆಯದು.

ಅಧ್ಯಕ್ಷರು —ತಾವು ಕಳುಹಿಸಿಕೊಟ್ಟಿರುವ ಪ್ರಶ್ನೆಗಳ ಬಗ್ಗೆ ಪರಿಶೀಲನೆ ಮಾಡಿಸಿ ಅದಷ್ಟು ಜಾಗ್ರತೆ ಆಜೆಂಡಾದಲ್ಲಿ ಸೇರಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪ.—ಈ ಬಜೆಟ್ ಅಧಿವೇಶನ ಪ್ರಾರಂಭವಾದ ಮೇಲೆ ನಾನು ಒಂದು ನಿಮಿಷವೂ ಸಹ ಈ ಸಭೆಯಿಂದ ಹೊರಗಡೆಗೆ ಹೋಗಿಲ್ಲ ನನ್ನ ಹೆಸರನ್ನು ಕರೆಯಬಹುದು, ನನ್ನ ಥಾನ್ಸ್ ಬರುತ್ತದೆಂದುಕೊಂಡು ಬಕಪಕ್ಷಿಯಂತೆ ತಮ್ಮ ಕಡೆಗೇ ನೆ ಡುತ್ತಾ ಕುಳಿತಿರುವುದನ್ನು ಬಿಟ್ಟರೆ ನನಗೆ ಬೇರೆ ಕಸಬೇ ಇಲ್ಲವಾಗಿದೆ. ಆದರೂ ನನಗೆ ಇನ್ನೂ ಥಾನ್ಸ್ ಸಿಕ್ಕಿಲ್ಲ. ಇದಕ್ಕೆ ಕಾರಣವೇನೆಂದು ತಾವು ಉತ್ತರ ಕೊಡಬೇಕು.

ಅಧ್ಯಕ್ಷರು.—ಆಯಾ ರಾಜಕೀಯ ಪಕ್ಷಗಳ ಮುಖ್ಯ ಸಚೇತಕರುಗಳು ಯಾರಿಗೆ ಮಾತನಾಡಲು ಆಧ್ಯತೆಯ ಮೇಲೆ ಅವಕಾಶ ಕೊಡಬೇಕೆಂಬ ಬಗ್ಗೆ ಬಂದು ಪಟ್ಟಿಯನ್ನು ತಯಾರಿಸಿ ಕೊಟ್ಟರೆ ನನ್ನ ಕಷ್ಟ ಪರಿಹಾರವಾಗುತ್ತದೆ ಮತ್ತು ನಿಮ್ಮ ಒಂದು ಕಳಕಳಿಯೂ ನೆರವೇರುತ್ತದೆ. I will give priority to the hon-Members who have not spoken yesterday. ನೆನ್ನೆ ದಿವಸ ಯಾರು ಯಾರಿಗೆ ಮಾತನಾಡಲು ಅವಕಾಶ ಸಿಕ್ಕಿಲ್ಲ ಎಂಬುದು ನನಗೆ ಗೊತ್ತಿದೆ. ಅಂತಹ ವರಿಗೆ ಮುಂದೆ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ) — ಮಾನ್ಯ ಸದಸ್ಯರು ಪ್ರಶ್ನೆ ಕಳುಹಿಸಿಕೊಟ್ಟ ೧೫ ದಿವಸಗಳಲ್ಲಿ ಸರ್ಕಾರದವರು ಉತ್ತರ ಕಳುಹಿಸಿಕೊಡಬೇಕೆಂದು ನಿಯಮವೇ ಇದೆ. ಒಂದುವೇಳೆ ಅಷ್ಟು ಕಾಲಾವಕಾಶ ಸಾಲದಿದ್ದರೆ ಕಾರಣ ಕೊಟ್ಟು ಸಮಯ ತೆಗೆದುಕೊಳ್ಳಬೇಕಾಗುತ್ತದೆ. ಬಜೆಟ್ ಭಾಷಣದ ಮೇಲೆ ಮಾತನಾಡಲು ಅವರಿಗೆ ಅವಕಾಶ ಸಿಗಲಿಲ್ಲವೆಂಬುದು ಬೇರೆ ವಿಚಾರ ಆದರೆ ಅವರು ಕಳುಹಿಸಿಕೊಟ್ಟ ಪ್ರಶ್ನೆಗಳಿಗೆ ಉತ್ತರ ಇನ್ನೂ ಬರದಿರಲು ಕಾರಣವೇನು ? ನಾನು ಸಹ ೨೦ ಪ್ರಶ್ನೆಗಳನ್ನು ಕಳುಹಿಸಿಕೊಟ್ಟು ಒಂದು ತಿಂಗಳ ಮೇಲಾಯಿತು ಇಪ್ಪತ್ತು ಒಂದು ಪ್ರಶ್ನೆಗೆ ಉತ್ತರ ಬಂದಿದೆ. ಈ ವಿಚಾರದಲ್ಲಿ ನಾನು ನಿಮ್ಮ ಸೆಕ್ರೆಟೇರಿಯಟ್‌ನ್ನು blame ಮಾಡ ತ್ತಿಲ್ಲ ಆದರೆ ಜಾಗ್ರತೆ ಉತ್ತರ ಕಳುಹಿಸುವಂತೆ ತಾವು ಸರ್ಕಾರಕ್ಕೆ ತಿಳಿಸಬೇಕಾಗುತ್ತದೆ. ಇನ್ನು ೨೦ ದಿವಸಗಳ ಕಾಲ ಸಭೆ ನಡೆಯಬಹುದು. ಅಷ್ಟರಲ್ಲಿ ನಮ್ಮ ಪ್ರಶ್ನೆಗಳಿಗೆ ಉತ್ತರ ಬರದಿದ್ದರೆ, ನಾವು ಪ್ರಶ್ನೆಗಳನ್ನು ಕಳುಹಿಸಿ ಕೊಟ್ಟ ಉದ್ದೇಶವೇ ಸಾಧನೆಯಾಗುವುದಿಲ್ಲ. ಆದ್ದರಿಂದ ತಾವು ಸರ್ಕಾರವನ್ನು ಕರಾಟೆಗೆ ತೆಗೆದುಕೊಳ್ಳ ಬೇಕಾಗುತ್ತದೆ, ಇಲ್ಲಿಯವರೆಗೆ ನಮಗೆ ೩೦೦-೪೦೦ Calling Attention Notice ಗಳು ಬಂದಿರಬಹುದು. ಇವುಗಳಲ್ಲಿ ಯಾವುದಕ್ಕೆ ಮೊದಲ ಆದ್ಯಾಮುಖ್ಯತೆ ಕೊಡಬೇಕೆಂಬ ಬಗ್ಗೆ ತಾವು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ, ಏಕೆಂದರೆ ಈಗತಾನೆ ಮಾನ್ಯ ಮಲ್ಲಪ್ಪನವರು ಒಬ್ಬ ಹುಡುಗನ ಕೈಕಾಲು ಕತ್ತರಿಸಿ ಹಾಕಿರುವ ವಿಚಾರವನ್ನು ಪ್ರಸ್ತಾಪ ಮಾಡಿದರು. ಆದರ ವಿವರ ನನಗೆ ಸರಿಯಾಗಿ ಗೊತ್ತಿಲ್ಲ.

ಶ್ರೀ ಕೆ. ಬಿ. ಮಲ್ಲಪ್ಪ.— ಆದರ ವಿವರ ಏನೆಂದರೆ, ಮೇ ತಿಂಗಳ ೨೫ನೇ ತಾರೀಖು ರಾತ್ರಿ ಸಿನಿಮಾ ಬಿಟ್ಟ ಮೇಲೆ ಒಬ್ಬ ಹುಡುಗನ ಕೈಕಾಲು ಕತ್ತರಿಸಿ ರೈಲ್ವೇ ಕಂಬಿಯ ಮೇಲೆ ಹಾಕಿದ್ದಾರೆ. ಅಪರಾಧಿ ಯಾರು ಎಂಬುದು ಗೊತ್ತಾಗಿದ್ದರೂ ಸಹ ಪೋಲೀಸಿನವರು ಯಾರನ್ನೂ ಅರೆಸ್ಟ್ ಮಾಡಿಲ್ಲ. ಈಗ ಆ ಹುಡುಗ ಆಸ್ಪತ್ರೆಯಲ್ಲಿದ್ದಾನೆ. ಬೇಕಾದರೆ ಇದನ್ನು ಪರಿಶೀಲನೆ ಮಾಡಲು ತಾವು ಯಾರ ನ್ನಾದರೂ ಕಳುಹಿಸಿಕೊಡಬಹುದು. ಇಂತಹ ಸೀರಿಯಸ್ ಕೇಸ್ ವಿಚಾರದಲ್ಲಿ ಪೋಲೀಸಿನವರು ಕ್ರಮ ತೆಗೆದುಕೊಳ್ಳದೆ ಇದರ ಮೇಲೆ ರೈಲ್ವೇ ಪೋಲೀಸಿನವರು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಆದರೆ ರೈಲ್ವೇ ಪೋಲೀಸಿನವರು ಇದು ನಮಗೆ ಸಂಬಂಧಪಟ್ಟಿದ್ದಲ್ಲವೆಂದು ಹೇಳುತ್ತಿದ್ದಾರೆ ಇಂತಹ ವಿಚಾರದಲ್ಲಿ ನಾವು Calling Attention Notice ಕಳುಹಿಸಿಕೊಟ್ಟಾಗ, ಅದಕ್ಕೆ ಸರ್ಕಾರದವರು ತಕ್ಷಣ ಉತ್ತರ ಕೊಡದಿದ್ದರೆ, ನಾವು ಇಲ್ಲಿಗೆ ಏತಕ್ಕೆ ಬರಬೇಕು ? ಇದೇ ನನ್ನ ಮುಖ್ಯವಾದ ಪ್ರಶ್ನೆ ?

ಶ್ರೀ ಬಿ. ಎ. ಮೊಹಿದ್ದೀನ್.—ಈಗ ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಕಳುಹಿಸಿಕೊಟ್ಟ ೧೫ ದಿವಸ ಗಳಲ್ಲಿ ಲಿಖಿತ ಉತ್ತರ ಬರದಿದ್ದರೆ ಸಂಬಂಧಪಟ್ಟ ಮಂತ್ರಿಗಳು ಬಾಯಲ್ಲಿ ಉತ್ತರ ತಿಳಿಸುತ್ತಾರೆ. ಬಜೆಟ್‌ಗೆ ಮುಂಚೆಯೇ ಸರ್ಕಾರದಿಂದ ಕೆಲವು ಉತ್ತರಗಳನ್ನು ಪಡೆಯ ಬೇಕಾಗಿರುತ್ತದೆ. ಆದ್ದರಿಂದ ನಾವು

ಪ್ರಶ್ನೆ ಕಳುಹಿಸುತ್ತೇನೆ. ಆದು ಸರಕಾರದಲ್ಲಿ ಉತ್ತರ ಬರದಿದ್ದರೆ ಹೇಗೆ ? ಆದ್ದರಿಂದ ಈ ಬಗ್ಗೆ ತಾವು ಸಮಗ್ರವಾಗಿ ಚಿಂತನೆ ಮಾಡಿ ಈಗಿನ ನಿಯಮಗಳನ್ನು ತಿದ್ದುಪಡಿ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ.

MR. SPEAKER.—I will invite the Leaders of all political parties and also the Government representative in this behalf and the suggestions of the hon Members will be looked into

SRI B.B. SAYANAK.—Mr. Speaker Sir, the other day I had given the names of Sri Pawashe and Sri Sirdesai, who wanted to speak on the Budget. I am the only man who has taken about 35 minutes. Who is the authority to submit the list ? But we are not given chances. Give chance partywise.

ಅಧ್ಯಕ್ಷರು.—ಇಲ್ಲಿ ಫೇರ್‌ಪ್ಲೇ ಹೇಗೆ ಇದೆಯೆಂಬುದನ್ನು ನಾನು ಹೇಳುತ್ತೇನೆ. The General discussion has taken.....

ಶ್ರೀ ಪುಪಾಪತಿ.—ಸ್ವಾಮಿ, ತಾವು ಕನ್ನಡದಲ್ಲೇ ಹೇಳಬೇಕು. ತಾವೇ ಕನ್ನಡದಲ್ಲಿ ಹೇಳದಿದ್ದರೆ ಇನ್ಯಾರು ಹೇಳುತ್ತಾರೆ.

MR. SPEAKER.—The General discussion has taken place on 8 days spread over 34 hours and 46 minutes.

14 Members from the ruling party and 19 Members from the Opposition have participated.

The time taken by the ruling party is 5 hours and 50 minutes and that by opposition is 15 hours and 56 minutes. ಇಷ್ಟಾದರೂ ಕೂಡ ವಿರೋಧಪಕ್ಷದವರು ನಮ್ಮನ್ನು ಅಪಾರ್ಥ ಮಾಡಿಕೊಳ್ಳುತ್ತಾರೆ. ದಯವಮಾಡಿ ಅವರು ಇದನ್ನು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಪುಪಾಪತಿ.—ಸ್ವಾಮಿ, ತಾವು ಅದಪ್ಪೂ ಕನ್ನಡದಲ್ಲೇ ಮಾತನಾಡಿ.

ಅಧ್ಯಕ್ಷರು.—ನಾನು ಕನ್ನಡದಲ್ಲೇ ಮಾತನಾಡುತ್ತೇನೆ, ನೀವು ದಯಮಾಡಿ ಕುಳಿತುಕೊಳ್ಳಿ.

SRI B. B. SAYANAK. - I appreciate that the Opposition has consumed 15 hours. But what about my Party ? Only myself has spoken from MES. I have submitted the names of Sri Pawasha and Sri Sirdesai. But no chance is given to them. They are complaining and abusing me.

ಅಧ್ಯಕ್ಷರು.—ಇದಕ್ಕೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಇನ್ನು ಮೇಲೆ Partywise devide ಮಾಡಬೇಕಾಗುತ್ತದೆ ಅಷ್ಟೆ. ಈ ಬಗ್ಗೆ ಬೇರೆ ಬೇರೆ ಪಕ್ಷದವರನ್ನು ಕರೆಸಿ ಮಾತನಾಡಿ ನಾನು ನನ್ನ ಸಲಹೆಯನ್ನು ಕೊಡುತ್ತೇನೆ.

SRI B. B SAYANAK.—Give chance according to partywise. What is the use of their coming here if they do not get chances to speak.